# ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)

ಸಂ. ನಸಶಿ/ನೀ.ಸ.ವಿ./ವಿವ- /2009-10 ದಿನಾಂಕ: 29-09-2009.

## ಟೆಂಡರು ಪ್ರಕಟಣೆ

ನಗರಸಭೆ, ಶಿರಸಿರವರ ನೀರು ಸರಬರಾಜು ವಿಭಾಗದಲ್ಲಿ ಕೆಲಸ ನಿರ್ವಹಿಸಲು ಫ್ಲ್ಯಾಟ್ ಲೋಡ್ ಬಾಡಿ (Flat Load Body) ಇರುವ ವಾಹನದ ಅವಶ್ಯಕತೆ ಇರುತ್ತಿದ್ದು, ಆಸಕ್ತಿವುಳ್ಳ ವಾಹನ ಮಾಲೀಕರು/ಟ್ರಾವೆಲ್ ಏಜನ್ಸಿಯವರು/ವಾಹನ ನಿರ್ವಹಣೆ ಹಾಗೂ ಚಾಲಕರ ಸಮೇತ ಮಾಹೆಯಾನ ಬಾಡಿಗೆ ಆಧಾರದ ಮೇಲೆ ಈ ಕೆಳಗಿನ ಶರ್ತುಗಳಿಗೆ ಒಳಪಟ್ಟು ತಮ್ಮ ದರವಾರುಗಳನ್ನು ದಿನಾಂಕ: 29-09-2009ರ ಒಳಗಾಗಿ ಈ ಕಛೇರಿಗೆ ನೀಡಬಹುದು.

**ಶರ್ತುಗಳು:-**

1. ಸರಕಾರಿ ಆದೇಶ ಸಂ. ಸಿ.ಅಸುಇ/139/2004/ಶಹಾನಿ/2004, ದಿ: 12-09-2006ರ ನಿಯಮಗಳಿಗೆ ಬದ್ಧರಾಗತಕ್ಕದ್ದು (ಆದೇಶ ಪತ್ರ ಈ ಕಛೇರಿಗೆ ಬಂದು ಪಡೆಯಬಹುದು).
2. ವಾಹನ ಮಾಲೀಕರು ಸದರ ವಾಹನ ಸಾರಿಗೆ ಇಲಾಖೆಯ ನಿಯಮಗಳಿಗೆ ಬದ್ಧರಾಗಿ ಇಡತಕ್ಕದ್ದು.
3. ವಾಹನ ನಿರ್ವಹಣೆ ಹಾಗೂ ವಿಮೆ, ಇಂಧನ ವೆಚ್ಚ ಇತ್ಯಾದಿಗಳನ್ನು ವಾಹನ ಮಾಲೀಕರೆ ನಿರ್ವಹಿಸತಕ್ಕದ್ದು.
4. ಶರ್ತುಬದ್ಧ ದರವಾರುಗಳನ್ನು ಪರಿಗಣಿಸಲಾಗುವುದಿಲ್ಲ.
5. ಟೆಂಡರುಗಳನ್ನು ಅಂಗೀಕರಿಸುವ ಹಾಗೂ ಕಾರಣ ಕೊಡದೆ ತಿರಸ್ಕರಿಸುವ ಅಧಿಕಾರಿ ಕಾಯ್ದಿರಿಸಿಕೊಳ್ಳಲಾಗಿದೆ.
6. ಫ್ಲ್ಯಾಟ್ ಲೋಡ್ ಬಾಡಿ (Flat Load Body) ವಾಹನವನ್ನು ಮಾತ್ರ ಬಾಡಿಗೆಗೆ ತೆಗೆದುಕೊಳ್ಳಲಾಗುವುದು.
7. ಕಛೇರಿಯ ಕೆಲಸಕ್ಕೆ ವಹಿಸಿದ ವಾಹನ ದುರಸ್ತಿ/ಇನ್ನಿತರೆ ಕಾರಣಗಳಿಗೆ ಲಭ್ಯವಿರದಿದ್ದರೆ ಬೇರೆ ವಾಹನವನ್ನು ಒದಗಿಸಬೇಕು.
8. ವಾಹನದಿಂದ/ಚಾಲಕನಿಂದ ಅಥವಾ ಇನ್ನಿತರೆ ಯಾವುದೇ ಕಾರಣಗಳಿಂದ ಆಗಬಹುದಾದ ಆಸ್ತಿ, ಪ್ರಾಣಹಾನಿಗೆ ಕಚೇರಿಯ ಜವಾಬ್ದಾರಿ ಇರುವುದಿಲ್ಲ.
9. ವಾಹನದ ಕುರಿತು ಹೆಚ್ಚಿನ ಮಾಹಿತಿಗಾಗಿ ನಗರಸಭೆ ಕಾರ್ಯಾಲಯದ ವೇಳೆಯಲ್ಲಿ ಪಡೆಯಬಹುದು.

ಸಹಿ ಇದೆ/-
ಅಧ್ಯಕ್ಷರು,
ನಗರಸಭೆ, ಶಿರಸಿ.

ಸಹಿ ಇದೆ/-
ಪೌರಾಯುಕ್ತರು,
ನಗರಸಭೆ, ಶಿರಸಿ.